ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**18.03.2026** **1.10 p.m.**

**<><><><>**

ಮುಖ್ಯಾಂಶಗಳು

1. ರಾಜ್ಯಸಭೆಯಲ್ಲಿಂದು ನಿವೃತ್ತರಾಗಲಿರುವ ೧೦ ರಾಜ್ಯಗಳ ೫೯ ಸದಸ್ಯರಿಗೆ ವಿದಾಯ
2. ಮುಂಬರುವ ವಿಧಾನಸಭೆ ಚುನಾವಣೆ, ಉಪಚುನಾವಣೆಗಳಿಗಾಗಿ ಕೇಂದ್ರ ವೀಕ್ಷಕರನ್ನು ನಿಯೋಜಿಸಿದ ಚುನಾವಣಾ ಆಯೋಗ
3. ಹರ್ಮುಜ್ ಜಲಸಂಧಿಯನ್ನು ಸುರಕ್ಷಿತವಾಗಿಡಲು ಅಮೆರಿಕಕ್ಕೆ ಸಹಾಯ ಮಾಡಲು ಸಿದ್ಧ- ಫ್ರಾನ್ಸ್ ಅಧ್ಯಕ್ಷ ಎಮಾನ್ಯುಯೆಲ್ ಮ್ಯಾಕ್ರನ್
4. ಇಂದೋರ್‌ನಲ್ಲಿ ಅಗ್ನಿ ಅವಘಡ; ಒಂದೇ ಕುಟುಂಬದ ಏಳು ಮಂದಿ ಸಾವು

<><><><>

ರಾಜ್ಯಸಭೆಯಲ್ಲಿ ಇಂದು ನಿವೃತ್ತರಾಗಲಿರುವ ೯ ಮಹಿಳಾ ಸದಸ್ಯರು ಸೇರಿದಂತೆ ೧೦ ರಾಜ್ಯಗಳ ೫೯ ಸದಸ್ಯರಿಗೆ ವಿದಾಯ ಹೇಳಲಾಯಿತು. ವಿದಾಯ ಸಮಾರಂಭದಲ್ಲಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ, ಸಂಸದೀಯ ಪ್ರಜಾಪ್ರಭುತ್ವಕ್ಕೆ ಅವರು ನೀಡಿದ ಕೊಡುಗೆ ಸದಾ ಸ್ಮರಣೀಯ ಎಂದು ಹೇಳಿದರು.

**ಪ್ರಧಾನಿ ನರೇಂದ್ರ ಮೋದಿ ( ೧೪ ಸೆಕೆಂಡ್ಸ್)**

ರಾಜಕೀಯದಲ್ಲಿ ಎಂದಿಗೂ ಪೂರ್ಣವಿರಾಮವಿಲ್ಲ. ಏಕೆಂದರೆ ಅವರ ಅನುಭವ ಹಾಗೂ ರಾಷ್ಟ್ರಕ್ಕೆ ನೀಡಿದ ಕೊಡುಗೆ ಯಾವಾಗಲೂ ಪ್ರಸ್ತುತ ಮತ್ತು ಮೌಲ್ಯಯುತವಾಗಿರುತ್ತದೆ. ನಿವೃತ್ತರಾಗುವ ಸದಸ್ಯರು ಸದನಕ್ಕೆ ಅಪಾರ ಕೊಡುಗೆ ನೀಡಿದ್ದಾರೆ ಎಂದರು. ನಿವೃತ್ತರಾಗುತ್ತಿರುವ ಉಪಸಭಾಪತಿ ಹರಿವಂಶ್ ಅವರನ್ನು ಉಲ್ಲೇಖಿಸಿ, ಈ ಸದನದಲ್ಲಿ ದೀರ್ಘಕಾಲದವರೆಗೆ ತಮ್ಮ ಜವಾಬ್ದಾರಿಗಳನ್ನು ನಿರ್ವಹಿಸುವ ಅವಕಾಶವನ್ನು ಹರಿವಂಶ್ ಹೊಂದಿದ್ದರು ಮತ್ತು ಸದನದ ಕಲಾಪಗಳನ್ನು ನಡೆಸುವಾಗ ಯಾವಾಗಲೂ ಎಲ್ಲರ ವಿಶ್ವಾಸವನ್ನು ಗಳಿಸಲು ಪ್ರಯತ್ನಿಸಿದ್ದರು ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

<><><><>

ಇ-ಕಾಮರ್ಸ್ ವಲಯದಲ್ಲಿ ಗ್ರಾಹಕರ ಹಕ್ಕುಗಳ ಉಲ್ಲಂಘನೆ ಮತ್ತು ಅನ್ಯಾಯದ ವ್ಯಾಪಾರದ ಪದ್ಧತಿಗಳಿಗಾಗಿ ಹಲವಾರು ಘಟಕಗಳ ವಿರುದ್ಧ ಕೇಂದ್ರ ಗ್ರಾಹಕ ರಕ್ಷಣಾ ಪ್ರಾಧಿಕಾರ-ಸಿಸಿಪಿಎ ಕ್ರಮ ಕೈಗೊಂಡಿದೆ ಎಂದು ಕೇಂದ್ರ ಗ್ರಾಹಕ ವ್ಯವಹಾರಗಳ ಸಚಿವ ಪ್ರಲ್ಹಾದ್ ಜೋಶಿ ತಿಳಿಸಿದ್ದಾರೆ.

ಲೋಕಸಭೆಯಲ್ಲಿಂದು ಪೂರಕ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಸಚಿವರು, ಗ್ರಾಹಕ ಹಕ್ಕುಗಳ ಉಲ್ಲಂಘನೆಗಾಗಿ ೨೦೨೦ರಿಂದ ಕಾನೂನು ಮಾಪನ ಶಾಸ್ತ್ರ ಇಲಾಖೆಯಿಂದ ೯೯೭ ನೋಟಿಸ್‌ಗಳನ್ನು ನೀಡಲಾಗಿದೆ. ಈ ಕ್ರಮದ ನಂತರ ಇ-ಕಾಮರ್ಸ್ ಸಂಸ್ಥೆಗಳು ತಮ್ಮ ಕುಂದು-ಕೊರತೆ ಪರಿಹಾರ ಕಾರ್ಯವಿಧಾನಗಳನ್ನು ಬಲಪಡಿಸಿವೆ ಎಂದು ಮಾಹಿತಿ ನೀಡಿದರು.

**ಧ್ವನಿ: ಪ್ರಲ್ಹಾದ್ ಜೋಶಿ ( ೧೮ ಸೆಕೆಂಡ್ಸ್ )**

ಇದುವರೆಗೆ ಗ್ರಾಹಕರಿಗೆ ೧ ಸಾವಿರದ ೪೪೦ ಕೋಟಿ ರೂಪಾಯಿಗಳ ಮರುಪಾವತಿಯನ್ನು ಸುಗಮಗೊಳಿಸಲಾಗಿದೆ. ಇದು ಇತ್ತೀಚಿನ ವರ್ಷಗಳಲ್ಲಿ ಗ್ರಾಹಕ ವ್ಯವಹಾರಗಳ ಇಲಾಖೆಯ ಅತಿ ದೊಡ್ಡ ಸಾಧನೆಗಳಲ್ಲಿ ಒಂದಾಗಿದೆ.

<><><><>

ಅಸ್ಸಾಂ, ಕೇರಳ, ಪುದುಚೇರಿ, ತಮಿಳುನಾಡು ಮತ್ತು ಪಶ್ಚಿಮ ಬಂಗಾಳದ ವಿಧಾನಸಭಾ ಚುನಾವಣೆಗಳು ಮತ್ತು ೭ ರಾಜ್ಯಗಳ ಉಪಚುನಾವಣೆಗಳಿಗಾಗಿ ಚುನಾವಣಾ ಆಯೋಗ, ಒಂದು ಸಾವಿರದ ಒಂದು ನೂರ ಹನ್ನೊಂದು ಕೇಂದ್ರ ವೀಕ್ಷಕರನ್ನು ನಿಯೋಜಿಸಿದೆ. ಅವರಲ್ಲಿ ೫೫೭ ಸಾಮಾನ್ಯ ವೀಕ್ಷಕರು, ೧೮೮ ಪೊಲೀಸ್ ವೀಕ್ಷಕರು ಮತ್ತು ೩೬೬ ವೆಚ್ಚ ವೀಕ್ಷಕರು ಎಂದು ಆಯೋಗ ತಿಳಿಸಿದೆ. ಈ ಕುರಿತು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಮಾತನಾಡಿ, ಚುನಾವಣೆಗಳನ್ನು ಮುಕ್ತ, ನ್ಯಾಯಯುತ ಹಾಗೂ ಹಿಂಸಾಚಾರ ಮತ್ತು ಪ್ರಚೋದನೆ ಮುಕ್ತ ರೀತಿಯಲ್ಲಿ ನಡೆಸಲಾಗುವುದು. ಪ್ರತಿಯೊಬ್ಬ ಮತದಾರರು ಯಾವುದೇ ಭಯ ಅಥವಾ ಆಮಿಷವಿಲ್ಲದೆ ಮುಕ್ತವಾಗಿ ಮತದಾನ ನಡೆಸುವುದನ್ನು ಖಚಿತಪಡಿಸಿಕೊಳ್ಳಲಾಗುವುದು ಎಂದು ಹೇಳಿದ್ದಾರೆ.

<><><><>

ಇರಾನ್ ವಿರುದ್ಧದ ಅಮೆರಿಕದ ಮಿಲಿಟರಿ ಕಾರ್ಯಾಚರಣೆಯಲ್ಲಿ ಭಾಗಿಯಾಗಲು ಹೆಚ್ಚಿನ ನ್ಯಾಟೊ ಮಿತ್ರರಾಷ್ಟ್ರಗಳು ನಿರಾಕರಿಸಿವೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ, ಇದೇ ವೇಳೆ ನ್ಯಾಟೊ ಮೈತ್ರಿಕೂಟವನ್ನು ಟೀಕಿಸಿರುವ ಅವರು, ಅಮೆರಿಕಕ್ಕೆ ವಿದೇಶಿ ಬೆಂಬಲದ ಅಗತ್ಯವಿಲ್ಲ ಎಂದು ಪ್ರತಿಪಾದಿಸಿದ್ದಾರೆ. ಬಹುತೇಕ ಪ್ರತಿಯೊಂದು ದೇಶವು ಅಮೆರಿಕ ಮಾಡುತ್ತಿರುವ ಕೆಲಸವನ್ನು ಬಲವಾಗಿ ಒಪ್ಪಿಕೊಂಡಿದೆ. ಇರಾನ್, ಯಾವುದೇ ರೀತಿಯಲ್ಲಿ ಅಥವಾ ರೂಪದಲ್ಲಿ ಪರಮಾಣು ಶಸ್ತ್ರಾಸ್ತ್ರವನ್ನು ಹೊಂದಲು ಅನುಮತಿಸಲು ಸಾಧ್ಯವಿಲ್ಲ ಎಂದು ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

<><><><>

ಹರ್ಮುಜ್ ಜಲಸಂಧಿಯನ್ನು ಸುರಕ್ಷಿತವಾಗಿಡಲು ಅಮೆರಿಕಕ್ಕೆ ಸಹಾಯ ಮಾಡಲು ಫ್ರಾನ್ಸ್ ಸಿದ್ಧವಾಗಿದೆ. ಇದು ಪ್ರಸ್ತುತ ನಡೆಯುತ್ತಿರುವ ಮಧ್ಯಪ್ರಾಚ್ಯ ಸಂಘರ್ಷದಿಂದ ಪ್ರತ್ಯೇಕವಾದ ಕಾರ್ಯಾಚರಣೆಯ ಭಾಗವಾಗಿದೆ ಎಂದು ಫ್ರಾನ್ಸ್ ಅಧ್ಯಕ್ಷ ಎಮಾನ್ಯುಯೆಲ್ ಮ್ಯಾಕ್ರನ್ ತಿಳಿಸಿದ್ದಾರೆ. ಪ್ಯಾರೀಸ್‌ನಲ್ಲಿ ಪತ್ರಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಯಾವುದೇ ಕಾರ್ಯಾಚರಣೆಗೂ ಮುನ್ನ ಇರಾನ್‌ನೊಂದಿಗೆ ಚರ್ಚೆ ಮತ್ತು ಸಂವಾದ ನಡೆಸುವ ಅಗತ್ಯವಿರುತ್ತದೆ. ಹರ್ಮುಜ್ ಜಲಸಂಧಿಯನ್ನು ಸುರಕ್ಷಿತಗೊಳಿಸುವ ಕಾರ್ಯಾಚರಣೆಯು ಸಂಪೂರ್ಣವಾಗಿ ಮಿಲಿಟರಿ ಕಾರ್ಯಾಚರಣೆ ಮತ್ತು ಬಾಂಬ್ ದಾಳಿಗಳಿಂದ ಪ್ರತ್ಯೇಕವಾಗಿರಬೇಕು ಎಂದು ಪ್ರತಿಪಾದಿಸಿದ್ದಾರೆ.

<><><>

ಮಧ್ಯಪ್ರದೇಶದ ಇಂದೋರ್‌ನ ತಿಲಕ್ ನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಸಂಭವಿಸಿದ ಭೀಕರ ಅಗ್ನಿ ಅವಘಡದಲ್ಲಿ ಏಳು ಮಂದಿ ಮೃತಪಟ್ಟಿದ್ದಾರೆ. ಬಂಗಾಳಿ ಚೌಕದಲ್ಲಿ ಬಳಿ ಬೆಳಗಿನ ಜಾವ ೪ ಗಂಟೆ ಸುಮಾರಿಗೆ ಮೂರು ಅಂತಸ್ತಿನ ಮನೆಯಲ್ಲಿ ಭಾರೀ ಬೆಂಕಿ ಕಾಣಿಸಿಕೊಂಡಿದೆ. ಆರಂಭಿಕ ವರದಿಗಳ ಪ್ರಕಾರ, ಮನೆಯ ಹೊರಗೆ ಚಾರ್ಜ್ ಆಗುತ್ತಿದ್ದ ಎಲೆಕ್ಟ್ರಿಕ್ ಕಾರಿನಲ್ಲಿ ಶಾರ್ಟ್ ಸರ್ಕ್ಯೂಟ್ ಉಂಟಾಗಿ ಬೆಂಕಿ ಕಾಣಿಸಿಕೊಂಡು, ಸ್ಫೋಟ ಸಂಭವಿಸಿದೆ. ಇದೇ ವೇಳೆ, ಮನೆಯಲ್ಲಿ ಇರಿಸಲಾಗಿದ್ದ ನಾಲ್ಕು ಎಲ್‌ಪಿಜಿ ಸಿಲಿಂಡರ್‌ಗಳು ಒಂದರ ನಂತರ ಒಂದು ಸ್ಫೋಟಗೊಂಡು ಕಟ್ಟಡದ ಒಂದು ಭಾಗ ಕುಸಿದು ಬಿದ್ದಿದೆ. ಒಂದೇ ಕುಟುಂಬದ ಏಳು ಮಂದಿ ಸಾವನ್ನಪ್ಪಿದ್ದು, ಇತರೆ ಮೂವರು ತೀವ್ರವಾಗಿ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಸ್ಥಳಕ್ಕೆ ಸಚಿವ ಕೈಲಾಸ್ ವಿಜಯ್‌ವರ್ಗೀಯ ಭೇಟಿ ನೀಡಿದ್ದು, ಅವಘಡದ ಕುರಿತು ತೀವ್ರ ದುಃಖ ವ್ಯಕ್ತಪಡಿಸಿದ್ದಾರೆ. ಘಟನೆಯ ತನಿಖೆಗಾಗಿ ತಜ್ಞರ ಸಮಿತಿಯನ್ನು ರಚಿಸಲಾಗುವುದು ಎಂದು ಅವರು ಘೋಷಿಸಿದ್ದಾರೆ.

<><><>

ಶ್ರೀಲಂಕಾ ದ್ವೀಪದ ಉತ್ತರ ಪ್ರದೇಶದಲ್ಲಿ ಪವನ ಶಕ್ತಿ ಯೋಜನೆಗಳನ್ನು ಸಂಪರ್ಕಿಸುವ ಪ್ರಮುಖ ವಿದ್ಯುತ್ ಪ್ರಸರಣ ಜಾಲವನ್ನು ನಿರ್ಮಿಸಲು ಭಾರತ-ಶ್ರೀಲಂಕಾ ಜಂಟಿ ಉದ್ಯಮವನ್ನು ಅನುಮೋದಿಸಿವೆ. ಭಾರತದ ಜ್ಯೋತಿ ಸ್ಟ್ರಕ್ಚರ್ ಲಿಮಿಟೆಡ್ ಮತ್ತು ಶ್ರೀಲಂಕಾದ ಹೇಲೀಸ್ ಫೆಂಟನ್ಸ್ ಲಿಮಿಟೆಡ್‌ನ ಜಂಟಿ ಉದ್ಯಮವಾದ 'ಇಂಟೆಂಡ್'ಗೆ ಟೆಂಡರ್ ನೀಡಲು ಸರ್ಕಾರ ಅನುಮೋದನೆ ನೀಡಿದೆ ಎಂದು ಶ್ರೀಲಂಕಾ ಸಚಿವೆ ನಲಿಂದಾ ಜಯತಿಸ್ಸಾ ತಿಳಿಸಿದ್ದಾರೆ. ೧.೧೭ ಶತಕೋಟಿ ಶ್ರೀಲಂಕಾ ರೂಪಾಯಿಗಳ ಮೌಲ್ಯದ ಒಪ್ಪಂದವು ಮನ್ನಾರ್ ಗ್ರಿಡ್ ಉಪ ಕೇಂದ್ರವನ್ನು

ಮುಲ್ಲಿಕುಲಂ ಗ್ರಿಡ್ ಸಬ್‌ಸ್ಟೇಷನ್‌ಗೆ ಸಂಪರ್ಕಿಸುವ ೨೮ ಕಿಲೋಮೀಟರ್ ಉದ್ದದ ೨೨೦ ಕೆವಿ ಡಬಲ್-ಸರ್ಕ್ಯೂಟ್ ಟ್ರಾನ್ಸ್‌ಮಿಷನ್ ಲೈನ್ ನಿರ್ಮಾಣವನ್ನು ಒಳಗೊಂಡಿದೆ.

<><><>

ವಿಶ್ವ ಆರೋಗ್ಯ ಸಂಸ್ಥೆ-ಡಬ್ಲ್ಯುಎಚ್‌ಒ ನಿಂದ ಹೊರಬರುವ ನಿರ್ಧಾರವನ್ನು ಅರ್ಜೆಂಟೀನಾ ಅಂತಿಮಗೊಳಿಸಿದೆ. ಅಮೆರಿಕ ನಡೆಯನ್ನು ಅನುಸರಿಸಿರುವ ಅರ್ಜೆಂಟೀನಾ ಜಾಗತಿಕ ಆರೋಗ್ಯ ಸಂಸ್ಥೆಯೊಂದಿಗಿನ ಸಂಬಂಧವನ್ನು ಔಪಚಾರಿಕವಾಗಿ ಕಡಿದುಕೊಂಡಿದೆ.  ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಅರ್ಜೆಂಟೀನಾ ವಿದೇಶಾಂಗ ಸಚಿವ ಪ್ಯಾಬ್ಲೊ ಕ್ವಿರ್ನೊ, ವಿಶ್ವ ಆರೋಗ್ಯ ಸಂಸ್ಥೆಯಿಂದ ಅರ್ಜೆಂಟೀನಾ ಹೊರಬರುವುದನ್ನು ದೃಢಪಡಿಸಿದ್ದಾರೆ.

<><><>

ದೇಶದಲ್ಲಿ ಬಿಸಿಲಿನ ತಾಪ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ರಾಷ್ಟ್ರೀಯ ರೋಗ ನಿಯಂತ್ರಣ ಕೇಂದ್ರ-ಎನ್‌ಸಿಡಿಸಿ ನಾಗರಿಕರಿಗೆ ಸಲಹೆ ನೀಡಿದೆ. ಬಿಸಿಲಿನ ತಾಪದಿಂದ ಸುರಕ್ಷಿತವಾಗಿರಲು ಸಾರ್ವಜನಿಕರು, ಗರಿಷ್ಠ ಶಾಖದ ಸಮಯದಲ್ಲಿ ಸಾಕಷ್ಟು ನೀರು ಕುಡಿಯುವುದು ಮತ್ತು ಭಾರವಾದ ಕೆಲಸವನ್ನು ತಪ್ಪಿಸುವುದು ಉತ್ತಮ ಎಂದು ಎನ್‌ಸಿಡಿಸಿ ಸಲಹೆ ನೀಡಿದೆ. ಜನರು ತಿಳಿ ಬಣ್ಣದ ಬಟ್ಟೆಗಳನ್ನು ಧರಿಸುವುದು ಒಳಿತು. ಶಾಖದ ತಾಪದಿಂದ ಬಳಲುತ್ತಿರುವ ವ್ಯಕ್ತಿಗೆ ಪ್ರಥಮ ಚಿಕಿತ್ಸೆ ನೀಡುವಾಗ, ಆ ವ್ಯಕ್ತಿಯನ್ನು ತಂಪಾದ ಪ್ರದೇಶದಲ್ಲಿ ಮಲಗಿಸಬೇಕು.  ಕ್ತಿಯು ಚೇತರಿಸಿಕೊಂಡ ನಂತರ ಹೆಚ್ಚಿನ ತೇವಾಂಶವಿರುವ ತಣ್ಣನೆಯ ನೀರು ಮತ್ತು ಆಹಾರವನ್ನು ಸ್ವಲ್ಪ ಸ್ವಲ್ಪ ನೀಡಬೇಕು ಎಂದು ಎನ್‌ಸಿಡಿಸಿ ಸಲಹೆ ನೀಡಿದೆ.

<><><>

ಬೆಲ್ಜಿಯಂ ಮತ್ತು ನೆದರ್ಲ್ಯಾಂಡ್ಸ್ ಜಂಟಿಯಾಗಿ ಆಮ್ಸ್ಟರ್‌ಡ್ಯಾಮ್‌ನಲ್ಲಿ ನಡೆಯಲಿರುವ ಪುರುಷರ ಎಫ್‌ಐಎಚ್ ಹಾಕಿ ವಿಶ್ವಕಪ್ ೨೦೨೬ ಪಂದ್ಯಗಳಿಗಾಗಿ ತಂಡಗಳ ವಿಭಾಗಗಳ ಪಟ್ಟಿ ಬಿಡುಗಡೆ ಮಾಡಿದೆ. ಇದೇ ಆಗಸ್ಟ್ ೧೪ ರಿಂದ ೩೦ ರವರೆಗೆ ಆಮ್ಸ್ಟರ್‌ಡ್ಯಾಮ್ ಮತ್ತು ವಾವ್ರೆ ನಲ್ಲಿ ಪಂದ್ಯಗಳು ನಡೆಯಲಿವೆ. ಸಾಂಪ್ರದಾಯಿಕ ಪ್ರತಿಸ್ಪರ್ಧಿಗಳಾದ ಭಾರತ ಮತ್ತು ಪಾಕಿಸ್ತಾನವನ್ನು ಪುರುಷರ ಎಫ್‌ಐಎಚ್ ಹಾಕಿ ವಿಶ್ವಕಪ್ ೨೦೨೬ ಗಾಗಿ 'ಡಿ' ಗುಂಪಿನಲ್ಲಿ ಆಡಲಿವೆ. ಇಂಗ್ಲೆಂಡ್ ಮತ್ತು ವೇಲ್ಸ್ 'ಡಿ' ಗುಂಪಿನಲ್ಲಿರುವ ಇತರ ತಂಡಗಳಾಗಿವೆ. ತಂಡಗಳನ್ನು ತಲಾ ನಾಲ್ಕು ಗುಂಪುಗಳಾಗಿ ವಿಂಗಡಿಸಲಾಗಿದೆ. ಮಹಿಳಾ ಎಫ್‌ಐಎಚ್ ವಿಶ್ವಕಪ್‌ನಲ್ಲಿ, ಭಾರತ, ಇಂಗ್ಲೆಂಡ್, ಚೀನಾ ಮತ್ತು ದಕ್ಷಿಣ ಆಫ್ರಿಕಾ 'ಡಿ' ಗುಂಪಿನಲ್ಲಿ ಇವೆ. ೨೦೧೦ ರ ನವದೆಹಲಿಯ ಆವೃತ್ತಿಯ ನಂತರ ಭಾರತ ಮತ್ತು ಪಾಕಿಸ್ತಾನ ಹಾಕಿ ವಿಶ್ವಕಪ್‌ನ ಮೊದಲ ಸುತ್ತಿನಲ್ಲಿ

ಮುಖಾಮುಖಿಯಾಗುತ್ತಿರುವುದು ಇದೇ ಮೊದಲು. ಪುರುಷ ಮತ್ತು ಮಹಿಳಾ ವಿಶ್ವಕಪ್ ಎರಡರ ಸಂಪೂರ್ಣ ಪಂದ್ಯಗಳ ವೇಳಾಪಟ್ಟಿ ನಾಳೆ ಬಿಡುಗಡೆಯಾಗಲಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>